**ಆಗಾಗ ಕೇಳಲಾಗುವ ಪ್ರಶ್ನೆಗಳು**

ಪ್ರ.೧ ಈ ಯೋಜನೆಯು ಯಾವ ರೀತಿಯದ್ದಾಗಿದೆ?

ವರ್ಷದಿಂದ ವರ್ಷಕ್ಕೆ ನವೀಕರಿಸುವ ಸೌಲಭ್ಯವಿರುವ ಒಂದು ವರ್ಷದ ಅವಧಿಯ ಜೀವವಿಮಾ ಯೋಜನೆ. ಸದಸ್ಯರ ಮರಣವು ಯಾವುದೇ ಕಾರಣದಿಂದ ಸಂಭವಿಸಿದರೂ ವಿಮಾರಕ್ಷಣೆಯನ್ನು ಇದು ಒದಗಿಸುತ್ತದೆ.

ಪ್ರ.೨ ಯೋಜನೆಯ ಸೌಲಭ್ಯಗಳು ಏನೇನು ಮತ್ತು ಪಾವತಿಸಬೇಕಾದ ಪ್ರೀಮಿಯಮ್ ಎಷ್ಟು?

ಸದಸ್ಯರ ಮರಣವು ಯಾವುದೇ ಕಾರಣದಿಂದ ಸಂಭವಿಸಿದರೂ ಈ ಯೋಜನೆಯಡಿ ರೂ.೨ ಲಕ್ಷದಷ್ಟು ವಿಮಾಮೊತ್ತವನ್ನು ಪಾವತಿಸಲಾಗುವುದು.ಒಬ್ಬ ಸದಸ್ಯ ಪಾವತಿಸಬೇಕಾದ ವಾರ್ಷಿಕ ಪ್ರೀಮಿಯಮ್ ದರ ರೂ. ೩೩೦.೦೦

ಪ್ರ.೩ ಪ್ರೀಮಿಯಮ್ ಪಾವತಿಯ ವಿಧಾನ ಯಾವುದು?

ನೋಂದಾವಣಾ ಸಮಯದಲ್ಲಿ ಆಯ್ಕೆ ನೀಡಿದ್ದಲ್ಲಿ ಪ್ರೀಮಿಯಮ್ ಮೊತ್ತವನ್ನು ಖಾತಾದಾರರ ಬ್ಯಾಂಕ್ ಉಳಿತಾಯ ಖಾತೆಯಿಂದ ಸ್ವಯಂಚಾಲಿತ ಕಟಾವಣೆಯ ವಿಧಾನದಲ್ಲಿ ಏಕಕಂತಿನಲ್ಲಿ ಕಡಿತಗೊಳಿಸಲಾಗುವುದು.ಮುಂದಿನ ವರ್ಷಗಳಲ್ಲಿ ಯೋಜನೆಯ ವಾರ್ಷಿಕ ಕಾರ್ಯನಿರ್ವಹಣೆಯ ಆಧಾರದಲ್ಲಿ ಪ್ರೀಮಿಯಮ್ ಮೊತ್ತದ ಪರಿಷ್ಕರಣೆಯ ಶರತ್ತಿಗೆ ಬದ್ಧರಾಗಿ ಸದಸ್ಯರು ಯೋಜನೆ ಜಾರಿಯಲ್ಲಿರುವವರೆಗೂ ಪ್ರತೀವರ್ಷ ತಮ್ಮ ಖಾತೆಯಿಂದ ಸ್ವಯಂಚಾಲಿತ ಕಟಾವಣೆಯ ವಿಧಾನದಲ್ಲಿ ತಮ್ಮ ಪ್ರೀಮಿಯಮ್ ಮೊತ್ತ'ವನ್ನು ಕಡಿತಗೊಳಿಸಲು ದೃಢೀಕರಣ ನೀಡಬಹುದು.

ಪ್ರ.೪ ಯೋಜನೆಯನ್ನು ನೀಡುವವರು/ ನಿರ್ವಹಿಸುವವರು ಯಾರು?

ಭಾರತೀಯ ಜೀವವಿಮಾ ನಿಗಮ ಹಾಗೂ ಇಚ್ಛೆಯುಳ್ಳ ಇತರ ಜೀವವಿಮಾ ಕಂಪೆನಿಗಳು ಸೂಕ್ತ ಅನುಮೋದನೆಯೊಂದಿಗೆ ಯೋಜನೆಯ ಶರತ್ತುಗಳಿಗೆ ಅನುಗುಣವಾಗಿ ಸಂಬಂಧಿತ ಬ್ಯಾಂಕ್‌ಗಳ ಸಹಭಾಗಿತ್ವದೊಂದಿಗೆ ಈ ಯೋಜನೆಯನ್ನು ನೀಡುತ್ತವೆ ಮತ್ತು ನಿರ್ವಹಿಸುತ್ತವೆ. ಯೋಜನೆಯ ಭಾಗೀದಾರ ಬ್ಯಾಂಕ್‌ಗಳು ಅಂಥ ಯಾವುದೇ ವಿಮಾ ಕಂಪೆನಿಗಳನ್ನು ಯೋಜನೆಯ ಅನುಷ್ಠಾನದಲ್ಲಿ ತೊಡಗಿಸಲು ಸ್ವತಂತ್ರವಾಗಿವೆ.

ಪ್ರ.೫ ಚಂದಾದಾರರಾಗಲು ಯಾರೆಲ್ಲ ಅರ್ಹರು?

ಯೋಜನೆಯ ಭಾಗೀದಾರ ಬ್ಯಾಂಕ್‌ಗಳಲ್ಲಿನ ೧೮ರಿಂದ ೫೦ರ ವಯೋಮಿತಿಯ ಎಲ್ಲ ಖಾತಾದಾರರು ಯೋಜನೆಗೆ ಸೇರಲು ಅರ್ಹರು.ಬೇರೆ ಬೇರೆ ಅಥವಾ ಒಂದೇ ಬ್ಯಾಂಕ್‌ನಲ್ಲಿ ಒಂದಕ್ಕಿಂತ ಹೆಚ್ಚು ಖಾತೆಗಳನ್ನು ಹೊಂದಿರುವವರು ಯಾವುದಾದರೂ ಒಂದು ಖಾತೆಯ ಮೂಲಕ ಮಾತ್ರ ಯೋಜನೆಗೆ ಸೇರಲು ಅವಕಾಶವಿದೆ.

ಪ್ರ.೬ ನೋಂದಣಾ ಅವಧಿ ಹಾಗೂ ವಿಧಾನಗಳೇನು?

ಯೋಜನೆಯ ಜಾರಿ ಅವಧಿಯಲ್ಲಿ ಅಂದರೆ, ೧ ಜೂನ್ ೨೦೧೫ರಿಂದ ೩೧ ಮೇ ೨೦೧೬ರವರೆಗಿನ ಅವಧಿಗೆ ಚಂದಾದಾರರು ೩೧ ಮೇ ೨೦೧೫ರೊಳಗಾಗಿ ಯೋಜನೆಗೆ ನೋಂದಾವಣೆಗೊಂಡು, ಪ್ರೀಮಿಯಮ್ ಮೊತ್ತವನ್ನು ತಮ್ಮ ಉಳಿತಾಯ ಖಾತೆಯಿಂದ ಸ್ವಯಂಚಾಲಿತ ಕಟಾವಣೆಗೆ ಒಪ್ಪಿಗೆಯನ್ನು ನೀಡಬೇಕು. ಈ ಸಾಲಿಗೆ ಅವಧಿ ಮೀರಿದ ನೋಂದಾವಣೆಗೆ ೩೧ ಆಗಸ್ಟ್ ೨೦೧೫ರವರೆಗೆ ಹೆಚ್ಚುವರಿ ಅವಕಾಶವನ್ನು ಭಾರತ ಸರ್ಕಾರ ನೀಡಿದೆ ಹಾಗೂ ಈ ಮುಂದುವರಿದ ಅವಧಿಯಲ್ಲಿ ಯೋಜನೆಗೆ ಸೇರಬಯಸುವವರು ನಿಗದಿತ ನಮೂನೆಯಲ್ಲಿ ತಮ್ಮ ಉತ್ತಮ ಆರೋಗ್ಯದ ಬಗ್ಗೆ ಸ್ವಯಂ ಘೋಷಣೆಯನ್ನು ನೀಡುವುದರೊಂದಿಗೆ ಪೂರ್ಣ ವಾರ್ಷಿಕ ಪ್ರೀಮಿಯಂ ಮೊತ್ತವನ್ನು ಏಕಕಂತಿನಲ್ಲಿ ಪಾವತಿಸಬೇಕು.

ಮೊದಲ ವರ್ಷದಿಂದಾಚೆಗೂ ಮುಂದುವರಿಸಬಯಸುವ ಚಂದಾದಾರರು ಮುಂದಿನ ಪ್ರತೀವರ್ಷ ಮೇ ೩೧ರೊಳಗಾಗಿ ಪ್ರೀಮಿಯಮ್ ಮೊತ್ತವನ್ನು ತಮ್ಮ ಉಳಿತಾಯ ಖಾತೆಯಿಂದ ಸ್ವಯಂಚಾಲಿತ ಕಟಾವಣೆಗೊಳಿಸಲು ಒಪ್ಪಿಗೆಪತ್ರವನ್ನು ನೀಡಬೇಕು. ವಿಳಂಬಿತ ನವೀಕರಣವು ಏಕಕಂತಿನಲ್ಲಿ ಪೂರ್ಣ ವಾರ್ಷಿಕ ಪ್ರೀಮಿಯಮ್ ಪಾವತಿ ಹಾಗೂ ಉತ್ತಮ ಆರೋಗ್ಯದ ಬಗ್ಗೆ ಸ್ವಯಂ ಘೋಷಣಾಪತ್ರದ ಸಲ್ಲಿಸುವಿಕೆಯ ಶರತ್ತಿಗೆ ಒಳಪಟ್ಟಿದೆ.

ಪ್ರ.೭ ಆರಂಭಿಕ ವರ್ಷದಲ್ಲಿ ಯೋಜನೆಗೆ ಸೇರ್ಪಡೆಗೊಳ್ಳಲು ವಿಫಲರಾದ ಅರ್ಹ ಫಲಾನುಭವಿಗಳು ಮುಂದಿನ ವರ್ಷಗಳಲ್ಲಿ ಸೇರ್ಪಡೆಗೊಳ್ಳಬಹುದೇ?

ಹೌದು. ಅರ್ಹರಿದ್ದೂ ಆರಂಭಿಕ ವರ್ಷದಲ್ಲಿ ಯೋಜನೆಗೆ ಸೇರ್ಪಡೆಗೊಳ್ಳದವರು ಸ್ವಯಂಚಾಲಿತ ಕಟಾವಣೆ ವಿಧಾನದ ಮೂಲಕ ಪ್ರೀಮಿಯಮ್ ಮೊತ್ತದ ಪಾವತಿ ಹಾಗೂ ಉತ್ತಮ ಆರೋಗ್ಯದ ಬಗ್ಗೆ ಸ್ವಯಂಘೋಷಣೆಯನ್ನು ಸಲ್ಲಿಸುವುದರೊಂದಿಗೆ ಯೋಜನೆಗೆ ಸೇರ್ಪಡೆಗೊಳ್ಳಬಹುದು ಹಾಗೂ ಹೊಸತಾಗಿ ಅರ್ಹತಾ ವರ್ಗಕ್ಕೆ ಸೇರುವ ಫಲಾನುಭವಿಗಳೂ ಇದೇ ರೀತಿಯಲ್ಲಿ ಯಾವುದೇ ಹಂತದಲ್ಲಿ ಯೋಜನೆಗೆ ಸೇರ್ಪಡೆಗೊಳ್ಳಬಹುದು.

ಪ್ರ.೮ ಯೋಜನೆಯಿಂದ ಒಮ್ಮೆ ಹೊರನಡೆಯುವವರಿಗೆ ಮತ್ತೆ ಸೇರ್ಪಡೆಗೆ ಅವಕಾಶವಿದೆಯೇ?

ಒಮ್ಮೆ ಯೋಜನೆಯಿಂದ ಹೊರನಡೆಯುವ ಫಲಾನುಭವಿಗಳು ನಿಗದಿತ ನಮೂನೆಯಲ್ಲಿ ತಮ್ಮ ಉತ್ತಮ ಆರೋಗ್ಯದ ಘೋಷಣೆ ನೀಡುವ ಮೂಲಕ ಭವಿಷ್ಯದಲ್ಲಿ ಬೇಕೆನಿಸಿದಾಗ ಮತ್ತೆ ಯೋಜನೆಗೆ ಸೇರ್ಪಡೆಗೊಳ್ಳಬಹುದು.

ಪ್ರ.೯ ಯೋಜನೆಯ ಮಾಸ್ಟರ್ ಪಾಲಿಸಿದಾರರು ಯಾರು?

ಭಾಗೀದಾರ ಬ್ಯಾಂಕ್‌ಗಳು ಮಾಸ್ಟರ್ ಪಾಲಿಸಿದಾರರು ಅನ್ನಿಸಿಕೊಳ್ಳುತ್ತವೆ. ಭಾರತೀಯ ಜೀವ ವಿಮಾ ನಿಗಮ/ ಇತರ ವಿಮಾ ಕಂಪೆನಿಗಳು ಬ್ಯಾಂಕುಗಳೊಂದಿಗೆ ಸಮಾಲೋಚಿಸಿ, ಒಂದು ಸರಳ ಹಾಗೂ ಚಂದಾದಾರ ಸ್ನೇಹಿ ಆಡಳಿತ ಮತ್ತು ಕ್ಲೇಮು ಪಾವತಿ ಪ್ರಕ್ರಿಯೆಯನ್ನು ನಿರ್ವಹಿಸುತ್ತವೆ.

ಪ್ರ.೧೦ಸದಸ್ಯರ ಜೀವವಿಮಾ ಭರವಸೆಯು ಯಾವಾಗ ಮುಕ್ತಾಯಗೊಳ್ಳುತ್ತದೆ?

ಸದಸ್ಯರ ಜೀವವಿಮಾ ಭರವಸೆಯು ಈ ಕೆಳಗಿನ ಯಾವುದೇ ಸಂದರ್ಭಗಳಲ್ಲಿ ಕೊನೆಗೊಳ್ಳುತ್ತದೆ ಅಥವಾ ನಿರ್ಬಂಧನೆಗೆ ಒಳಪಡುತ್ತದೆ.

೧) ಸದಸ್ಯರು ೫೫ರ ಪ್ರಾಯಕ್ಕೆ ತಲಪಿದಾಗ (ಹುಟ್ಟಿದ ದಿನಾಂಕದ ಸಮೀಪದ ವಯಸ್ಸು), ಆವರೆಗೆ ಎಡೆಬಿಡದೆ ಪ್ರತೀವರ್ಷ ವಾರ್ಷಿಕ ನವೀಕರಣ ಮಾಡಿದ್ದಲ್ಲಿ (೫೦ ವರ್ಷದ ಬಳಿಕ ಯೋಜನೆಗೆ ಸೇರ್ಪಡೆಗೊಳ್ಳುವ ಅವಕಾಶ ಖಂಡಿತಾ ಇರುವುದಿಲ್ಲ)

೨) ಬ್ಯಾಂಕ್ ಖಾತೆಯನ್ನು ಮುಕ್ತಾಯಗೊಳಿಸಿದಾಗ ಅಥವಾ ವಿಮೆಯನ್ನು ಚಾಲ್ತಿಯಲ್ಲಿಡಲು ಸಾಕಷ್ಟು ಮೊತ್ತದ ಶಿಲ್ಕು ಲಭ್ಯವಿಲ್ಲದಿದ್ದಾಗ

೩) ಭಾರತೀಯ ಜೀವವಿಮಾ ನಿಗಮ/ ಇತರ ಕಂಪೆನಿಗಳ ಮೂಲಕ ಒಬ್ಬ ಸದಸ್ಯರ ಒಂದಕ್ಕಿಂತ ಹೆಚ್ಚು ಖಾತೆಗಳು ಸದ್ರಿ ಯೋಜನೆಗೆ ಒಳಗೊಂಡಿದ್ದು, ಆ ಎಲ್ಲ ಖಾತೆಗಳಿಂದ ಬೇರೆ ಏರೆ ಕಂಪೆನಿಗಳಿಗೆ ಪ್ರೀಮಿಯಮ್ ಮೊತ್ತ ಪಾವತಿಯಾಗುತ್ತಿದ್ದಲ್ಲಿ ವಿಮಾ ವ್ಯಾಪ್ತಿಯನ್ನು ರೂ. ೨ ಲಕ್ಷಗಳಿಗೆ ಸೀಮಿತಗೊಳಿಸಲಾಗುವುದು ಹಾಗೂ

ಹೆಚ್ಚುವರಿ ಪಾವತಿಗೊಂಡ ಪ್ರೀಮಿಯಮ್ ಮೊತ್ತ'ವನ್ನು ಸದಸ್ಯರು ಕಳಕೊಳ್ಳಬೇಕಾಗುತ್ತದೆ.

ಪ್ರ.೧೧ ವಿಮಾ ಕಂಪೆನಿ ಹಾಗೂ ಭಾಗೀದಾರ ಬ್ಯಾಂಕ್‌ಗಳ ಪಾತ್ರವೇನು?

೧) ಭಾರತೀಯ ಜೀವವಿಮಾ ನಿಗಮ ಹಾಗೂ ಇಚ್ಛೆಯುಳ್ಳ ಇತರ ಜೀವವಿಮಾ ಕಂಪೆನಿಗಳು ಬ್ಯಾಂಕ್‌ಗಳ ಸಹಭಾಗಿತ್ವ'ದೊಂದಿಗೆ ಈ ಯೋಜನೆಯನ್ನು ನಿರ್ವಹಿಸುತ್ತವೆ.

೨) ಖಾತಾದಾರರ ಆಯ್ಕೆಯಂತೆ ಸ್ವಯಂ ಚಾಲಿತ ಕಟಾವಣೆಯ ಮೂಲಕ ಪಾವತಿ ದಿನಾಂಕದಂದು ಅಥವಾ ಮುಂಚಿತವಾಗಿ ಏಕಕಂತಿನಲ್ಲಿ ವಾರ್ಷಿಕ ಪ್ರೀಮಿಯಮ್ ಅನ್ನು ವಸೂಲು ಮಾಡುವುದು ಮತ್ತು ಸದ್ರಿ ಮೊತ್ತವನ್ನು ಸಂಬಂಧಿತ ವಿಮಾ ಕಂಪೆನಿಗೆ ವರ್ಗಾವಣೆ ಮಾಡುವುದು ಭಾಗೀದಾರ ಬ್ಯಾಂಕ್‌ಗಳ ಜವಾಬ್ದಾರಿಯಾಗಿರುತ್ತದೆ.

೩) ನೋಂದಣಾ ಅರ್ಜಿ, ಸ್ವಯಂಚಾಲಿತ ಕಟಾವಣಾ ದೃಢೀಕರಣ/ ಒಪ್ಪಿಗೆ ಅಥವಾ ಘೋಷಣಾಪತ್ರಗಳ ನಿಗದಿತ ನಮೂನೆಗಳನ್ನು ಭಾಗೀದಾರ ಬ್ಯಾಂಕ್‌ಗಳಿಂದ ಪಡಕೊಳ್ಳಬಹುದು ಹಾಗೂ ಮುಂದೆ ಬ್ಯಾಂಕ್‌ಗಳಲ್ಲಿಯೇ ಅವುಗಳನ್ನು ಇರಿಸಲಾಗುವುದು. ಕ್ಲೇಮುಗಳ ಸಂದರ್ಭದಲ್ಲಿ ಈ ಎಲ್ಲ ದಾಖಲೆಗಳನ್ನು ಹಾಜರುಪಡಿಸುವಂತೆ ಭಾರತೀಯ ಜೀವವಿಮಾ ನಿಗಮ/ ವಿಮಾ ಕಂಪೆನಿಗಳು ಬ್ಯಾಂಕ್‌ಗಳನ್ನು ಕೋರಬಹುದು. ಅಲ್ಲದೇ ಯಾವುದೇ ಸಮಯದಲ್ಲಿ ಈ ದಾಖಲೆಗಳನ್ನು ಕೋರುವ ಅಧಿಕಾರವು ಭಾರತೀಯ ಜೀವವಿಮಾ ನಿಗಮ/ ವಿಮಾ ಕಂಪೆನಿಗಳಿಗಿದೆ.

ಪ್ರ.೧೨ ಪ್ರೀಮಿಯಮ್ ಮೊತ್ತದ ಪ್ರಮಾಣವು ಎಷ್ಟೆಷ್ಟಿರುತ್ತದೆ?

೧) ಭಾರತೀಯ ಜೀವವಿಮಾ ನಿಗಮ/ ವಿಮಾ ಕಂಪೆನಿಯ ಪ್ರೀಮಿಯಮ್: ವಾರ್ಷಿಕ ರೂ. ೨೮೯.೦೦

೨) ಇತರ ಏಜೆಂಟರ ವೆಚ್ಚದ ಮರುಪಾವತಿ: ಸದಸ್ಯರೊಬ್ಬರಿಗೆ ವಾರ್ಷಿಕ ರೂ. ೩೦.೦೦

೩) ಭಾಗೀದಾರ ಬ್ಯಾಂಕ್‌ಗಳ ಆಡಳಿತ ವೆಚ್ಚದ ಮರುಪಾವತಿ: ಸದಸ್ಯರೊಬ್ಬರಿಗೆ ವಾರ್ಷಿಕ ರೂ. ೧೧.೦೦

ಪ್ರ.೧೩ ಈ ಜೀವವಿಮೆಯು ಚಂದಾದಾರರು ಈಗಾಗಲೇ ಹೊಂದಿರಬಹುದಾದ ಇತರ ಯಾವುದೇ ಜೀವವಿಮೆಗೆ ಹೆಚ್ಚುವರಿಯಾಗಿರುತ್ತದೆಯೇ?
ಹೌದು.